ಅಧ್ಯಕ್ಷರು: ಇದು ಬಂದ ತಕ್ಷಣ ಹಾಕುತ್ತೇವೆ, ನಾವು ಪ್ರತಿ ದಿವಸ ಎರಡೆರಡು ಹಾಕುತ್ತಿದ್ದೇವೆ. ನಮ್ಮ ಕಛೇರಿಯಲ್ಲಿ ಇನ್ನು ಕೆಲವು ಪೆಂಡಿಂಗ್ ಇರುತ್ತವೆ. ಕೆಲವು ಉತ್ತರ ಬಂದಿದೆ ಕೆಲವು ಉತ್ತರಗಳು ಬಂದಿರುವುದಿಲ್ಲ. We are having another 12 working days. ಇನ್ನು 24 ಕಾಲಿಂಗ್ ಅಟೆನ್‌ಷನ್ ಬರುತ್ತವೆ, ಬಂದಂತೆ ಹಾಕಿಕೊಂಡು ಹೋಗುತ್ತೇವೆ.

11.50 ಎ.ಎಂ.

5. ಗಮನ ಸೆಳೆಯುವ ಸೂಚನೆ

ಅ) ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗ ಅಭಿವೃದ್ಧಿ ನಿಗಮವು ಸಮವಸ್ತ್ರ ಪೂರೈಸುತ್ತಿರುವುದರಿಂದ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ನೇಕಾರರಿಗೆ ಉಂಟಾಗಿರುವ ಸಮಸ್ಯೆಯ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋದಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗ ಅಭಿವೃದ್ಧಿ ನಿಗಮವು ಸಮವಸ್ತ್ರ ಪೂರೈಸುತ್ತಿರುವುದರಿಂದ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ನೇಕಾರರಿಗೆ ಉಂಟಾಗಿರುವ ಸಮಸ್ಯೆಯ ಬಗ್ಗೆ ರೇಷ್ಮೆ ಹಾಗೂ ಜವಳಿ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು): ಮಾನ್ಯ ಅಧ್ಯಕ್ಷರೆ,

ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗ ಅಭಿವೃದ್ಧಿ ನಿಗಮವೂ ಸಹ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಂತೆಯೇ ಕರ್ನಾಟಕ ಸರ್ಕಾರದ ಒಂದು ಉದ್ದಿಮೆಯಾಗಿರುತ್ತದೆ. ಸದರಿ ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ಪ್ರೋತ್ಸಾಹ ನೀಡಿದಂತೆ, ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮಕ್ಕೂ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ಸರ್ಕಾರದ ಇಲಾಖೆಯ ಅವಶ್ಯಕ ಬಟ್ಟೆಗಳನ್ನು ಈ ಎರಡೂ ಸಂಸ್ಥೆಗಳಿಂದಲೂ ಖರೀದಿಸುವಂತೆ, ಸರ್ಕಾರದ ಇಲಾಖೆ, ಸಂಸ್ಥೆಗಳಿಗೆ ಸುತ್ತೋಲೆ ಮುಖಾಂತರ ನಿರ್ದೇಶನ ನೀಡಲಾಗಿದೆ.

ಕೈಮಗ್ಗಗಳಿಗೆ ಹೋಲಿಸಿದರೆ ವಿದ್ಯುತ್ ಮಗ್ಗಗಳ ಸ್ಥಿತಿಯೂ ಅಷ್ಟೇನೂ ಚೆನ್ನಾಗಿರುವುದಿಲ್ಲ. ಕೈಮಗ್ಗ ನೇಕಾರರಿಗೆ ಇರುವಂತೆ ವಿದ್ಯುತ್ ಮಗ್ಗ ನೇಕಾರರಿಗೂ ಸಹ ಮಾರುಕಟ್ಟೆ ಸಮಸ್ಯೆ ಇರುತ್ತದೆ. ಅಲ್ಲದೇ ಕೈಗಮಗ್ಗ ನೇಕಾರರಿಗೆ ಇರುವಂತೆ ವಿದ್ಯುತ್‌ಮಗ್ಗ ನೇಕಾರರಿಗೆ ಯಾವುದೇ ವಿಶೇಷ ಸೌಲಭ್ಯ ಇರುವುದಿಲ್ಲ. ಅಂದರೆ, ಮಾರುಕಟ್ಟೆ ಅಭಿವೃದ್ಧಿ ಸಹಾಯಧನ ವಸತಿ: ಕಾರ್ಯಾಗಾರ ಯೋಜನೆ, ಬಡ್ಡಿ ಸಹಾಯಧನ ಯೋಜನೆ, ತ್ರಿಫ್ಟ್‌ಫಂಡ್ ಯೋಜನೆ, ಇತ್ಯಾದಿ; ಕೇವಲ ಗುಂಪು ವಿಮಾ ಯೋಜನೆ ಸೌಲಭ್ಯ ಮಾತ್ರ ವಿದ್ಯುತ್ ಮಗ್ಗಗಳ ನೇಕಾರರಿಗೆ ಅನ್ವಯಿಸಲಾಗಿದೆ.

ಕರ್ನಾಟಕ ವಿದ್ಯುತ್‌ಮಗ್ಗಗಳ ಅಭಿವೃದ್ಧಿ ನಿಗಮಕ್ಕೆ 1997-98ನೇ ಸಾಲಿನಿಂದ ಸಮವಸ್ತ್ರ ಪೂರೈಕೆ ಮಾಡಲು ಕೋರಲಾಗುತ್ತಿದೆ. ಕ.ರಾ.ವಿದ್ಯುತ್‌ಮಗ್ಗ ಹಾಗೂ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಗಳ ಕಳೆದ 3 ವರ್ಷಗಳ ವಹಿವಾಟು ಈ ಕೆಳಕಂಡಂತಿದೆ:

ವರ್ಷ	ಬಟ್ಟೆ ಉತ್ಪಾದನೆ (ಲಕ್ಷ ಮೀಟರ್‌ಗಳಲ್ಲಿ)		ಒಟ್ಟು ಮೌಲ್ಯ (ಕೋಟಿ ರೂಪಾಯಿಗಳಲ್ಲಿ)	
	ಕೆಎಸ್‌ಡಿಸಿ	ಕೆಎಸ್‌ಪಿಡಿಸಿ	ಕೆಹೆಚ್‌ಡಿಸಿ	ಕೆಎಸ್‌ಪಿಡಿಸಿ
1997-98	205	2.90	80.00	1.30
1998-99	214	12.46	79.00	5.60
1999-2000	219	11.11	80.00 (ಅಂದಾಜು)	5.05

ಈ ಮೇಲಿನ ಅಂಶಗಳನ್ನು ಗಮನಿಸಿದಾಗ ಕರ್ನಾಟಕ ರಾಜ್ಯ ವಿದ್ಯುತ್‌ಮಗ್ಗ ಅಭಿವೃದ್ಧಿ ನಿಗಮದ ವಹಿವಾಟಿನಿಂದ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಉತ್ಪಾದನೆಯಾಗಲಿ, ಅಥವಾ ವಹಿವಾಟಾಗಲಿ ಕಡಿಮೆ ಆಗಿರುವುದಿಲ್ಲ. ಹಾಗಾಗಿ ಕೈಮಗ್ಗ ನೇಕಾರರಿಗೆ ಕರ್ನಾಟಕ ವಿದ್ಯುತ್ ಮಗ್ಗ ಅಭಿವೃದ್ಧಿ ನಿಗಮದ ವ್ಯವಹಾರದಿಂದ ಯಾವುದೇ ಸಮಸ್ಯೆ ಉದ್ಭವವಾಗಿಲ್ಲ.

ಈ ಕೈಮಗ್ಗ ಮತ್ತು ವಿದ್ಯುತ್ ಮಗ್ಗ ಸರ್ಕಾರಕ್ಕೆ ಬಲಗೈ ಹಾಗೂ ಎಡಗೈ ಇದ್ದ ಹಾಗೆ ಇದೆ. ಯಾವುದೇ ನೇಕಾರರಿಗೆ ಅನ್ಯಾಯವಾಗುವುದಕ್ಕೆ ಬಿಡುವುದಿಲ್ಲ. ನಾವು ಕೈಮಗ್ಗದ ನೇಕಾರರಿಗೆ ಹೆಚ್ಚಿಗೆ ಒತ್ತನ್ನು ಕೊಡುತ್ತಿದ್ದೇವೆ. ಏಕೆಂದರೆ, ಪವರ್‌ಲೂಮ್‌ನಲ್ಲಿರತಕ್ಕಂತಹ ನೇಕಾರರು ಅಷ್ಟೇ ಪ್ರಮಾಣದಲ್ಲಿ ಬಡತನದಲ್ಲಿದ್ದಾರೆ, ಅವರುಗಳು ಇದನ್ನು ಅವಲಂಬಿಸಿಕೊಂಡಿದ್ದಾರೆ. ಆದ್ದರಿಂದ ಸರ್ಕಾರವು ಎರಡಕ್ಕೂ ಪ್ರೋತ್ಸಾಹವನ್ನು ಕೊಟ್ಟು, ಕೈಮಗ್ಗದ ನೇಕಾರರಿಗೆ ಯಾವುದೇ ತರಹದ ತೊಂದರೆಯೂ ಆಗದಂತೆ ನೋಡಿಕೊಳ್ಳುತ್ತಿದ್ದೇವೆ.

+ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧಪಕ್ಷದ ನಾಯಕರು): ಮಾನ್ಯ ಸಚಿವರು ಕೊಟ್ಟಂತಹ ಉತ್ತರವನ್ನು ನೋಡಿದ್ದೇನೆ. ಈ ಒಂದು ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮತ್ತು ಪವರ್‌ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಈ ಎರಡರ ನಡುವೆ ಇದ್ದಂತಹ ಕಾರ್ಮಿಕರ ಒಂದು ಸಮಸ್ಯೆಯ ಬಗ್ಗೆ ಇವತ್ತು ಚಿಂತನೆಯು ಆಗಬೇಕಾಗಿದೆ. ಈ ಅಂಕಿಅಂಶಗಳನ್ನು ಹೋಲಿಸಿ ನೋಡಿದರೆ, ಯಾವುದೇ ರೀತಿಯಿಂದ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಿಂದ ಅಲ್ಲಿರುವ ಯಾವುದೇ ನೇಕಾರರಿಗೆ ಅನ್ಯಾಯವಾಗುವುದಿಲ್ಲವೆನ್ನುವ ಸ್ಪಷ್ಟೀಕರಣವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಇಲ್ಲಿ ನಾವು ಬೇಸಿಕ್ ಆಗಿ ವಿಚಾರ ಮಾಡುವುದೇನೆಂದರೆ, ಇಲ್ಲಿ ಪವರ್‌ಲೂಮ್ ನೇಕಾರರು ಇದ್ದಾರೆ ಅವರಿಗೆ ಅನ್ಯಾಯವಾಗುವುದು ಬೇಡ. ಅವರಿಗೆ ಆರ್ಡರ್ಸ್‌ನ್ನು ಕೊಟ್ಟು ಅವರು ಹೆಚ್ಚಿಗೆ ಸಪ್ಲೈ ಮಾಡುವುದಕ್ಕೆ ಹೋದರೆ ಇಲ್ಲಿ ಕೈಮಗ್ಗದ ನೇಕಾರರಿಗೆ ತೊಂದರೆಯಾಗುತ್ತದೆ. ಈ ಒಂದು ರೇಷಿಯೋ ಮುಂದುವರಿದರೆ ಅಡ್ಡಿಯಿಲ್ಲ, ಆದರೆ ಇವತ್ತು ಏನಾಗಿದೆ ಎಂದರೆ ಕೈಮಗ್ಗ ನೇಕಾರರು ಯಾರು ಇದ್ದಾರೆ, ಇವರುಗಳು ಬಹುಶಃ ನಮ್ಮ ಉತ್ತರ ಕರ್ನಾಟಕದ ಭಾಗದಿಂದ ಬಂದವರು ಆಗಿದ್ದಾರೆ. 15 ರಿಂದ 20 ಸಾವಿರ ಜನ ನೇಕಾರರು ಕೈಮಗ್ಗ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನ ಮೇಲೆ ಡಿಪೆಂಡ್ ಆಗಿರುವವರು ಇದ್ದಾರೆ. ಮೊನ್ನೆ ನಡೆದಂತಹ ಘಟನೆಯು ಸಹ ಮಾನ್ಯ ಸಚಿವರ ಗಮನಕ್ಕೆ ಹೋಗಿರಬಹುದು. ಈ ಒಂದು ಶಿಕ್ಷಣ ಇಲಾಖೆಯಿಂದ "ವಿದ್ಯಾ ವಿಕಾಸ

ಯೋಜನೆ" ಮುಖಾಂತರವಾಗಿ ಪ್ರತಿ ವರ್ಷವು 32 ರಿಂದ 37 ಕೋಟಿ ರೂಪಾಯಿಗಳು ಈ ಒಂದು ಸಮವಸ್ತ್ರ ಖರೀದಿಗೆ ಆರ್ಡರನ್ನು ಕೊಡುತ್ತಿದ್ದರು. ಮೊನ್ನೆ ದಿನ ಅವರು ಆರ್ಡರನ್ನು ಕೊಡುವುದು ತಡವಾಯಿತು, ಇದಾದನಂತರ ನಾವು ಹ್ಯಾಂಡ್‌ಲೂಮ್ ಕಾರ್ಪೊರೇಷನ್ ನೇಕಾರರಿಗೆ ಆರ್ಡರನ್ನು ಕೊಡುವುದಿಲ್ಲವೆಂದು ಮಾನ್ಯ ಶಿಕ್ಷಣ ಇಲಾಖೆಯ ಸಚಿವರು ಹೇಳಿದರು. ಅನಂತರ ಸನ್ಮಾನ್ಯ ಸಚಿವರು ಆರ್ಡರನ್ನು ಕೊಡಲೇ ಬೇಕೆಂದು ಹೇಳಿದರು, ಇದರ ಬಗ್ಗೆ ಸಾಕಷ್ಟು, ಚರ್ಚೆಯೂ ಆಗಿದೆ, ಆ ಸಂದರ್ಭದಲ್ಲಿ ನಾನು ಗಮನಸೆಳೆಯುವ ಸೂಚನೆಯನ್ನು ಕೊಟ್ಟಿದ್ದೇನೆ. ಇದರ ಬಗ್ಗೆ ಮಧ್ಯಂತರದಲ್ಲಿ ಬಹಳಷ್ಟು ಚರ್ಚೆಯಾಗಿ ನಾವು ನೇಕಾರರಿಗೆ ಅನ್ಯಾಯವನ್ನು ಮಾಡುವುದಿಲ್ಲವೆಂದು ಮಾನ್ಯ ಶಿಕ್ಷಣ ಸಚಿವರು ಮತ್ತು ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಇಬ್ಬರು ಸೇರಿ ಜಂಟಿ ಪತ್ರಿಕಾ ಹೇಳಿಕೆಯನ್ನು ನೀಡಿ ಆ ರೀತಿ ಆಗಿರುವ ಅನ್ಯಾಯವನ್ನು ಸರಿಪಡಿಸುತ್ತೇವೆಂದು ಹೇಳಿದರು. ಇದರ ಬಗ್ಗೆ ನನ್ನದೊಂದು ಸ್ಪಷ್ಟೀಕರಣವನ್ನು ನಾನು ಇವತ್ತು ಮಾನ್ಯ ಸಚಿವರಲ್ಲಿ ಕೇಳುವುದೇನೆಂದರೆ, ಇವತ್ತು ಸಮವಸ್ತ್ರ ಇಷ್ಯೂ ಏನಿದೆ, ಅದು ಪ್ರತಿವರ್ಷವು ಹೀಗೆ ರೈಸ್ ಆಗಬಾರದು. ನೀವು ಈ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ಎಷ್ಟು ಕೊಡುತ್ತಿದ್ದೀರಿ, ಪವರ್‌ಹ್ಯಾಂಡ್‌ಲೂಮ್ ಕಾರ್ಪೊರೇಷನ್ ನೇಕಾರರಿಗೆ ಎಷ್ಟು ಕೊಡುತ್ತಿದ್ದೀರಿ ಅದು ಡಿಫರೆಂಟ್ ಇಷ್ಯೂ ಆಗಿದೆ. ಆ ರೇಷಿಯೋ ಮತ್ತೆ ಹೆಚ್ಚು ಕಡಿಮೆಯಾದರೆ ಮತ್ತೆ ಕೈಮಗ್ಗದ ನೇಕಾರರಿಗೆ ಅನ್ಯಾಯವಾಗುತ್ತದೆ. ಆದರೆ ಪವರ್‌ಹ್ಯಾಂಡ್‌ಲೂಮ್ ನೇಕಾರರಿಗೆ ಮಿನಿಮಮ್ ಎಷ್ಟು ಕೊಡುತ್ತಿದ್ದಿರೋ ಅಷ್ಟನ್ನು ಕೊಡಿ, ಆದರೆ ಇದು ಅತಿಯಾಗಬಾರದು; ನಾಳೀ ದಿವಸ ಹೆಚ್ಚಿಗೆ ಆಗಬಾರದು. ಆದು ಆದಾಗ ಇಲ್ಲಿ ಕೈಮಗ್ಗದ ಮೇಲೆ ಅವಲಂಬಿತರಾದ ನೇಕಾರರಿಗೆ ಇದರಿಂದ ಹೊಡೆತ ಬೀಳುತ್ತದೆ. ಈ ಸಮವಸ್ತ್ರ, ಬಟ್ಟೆಗಳನ್ನು ಸಪ್ಲೈ ಮಾಡುವಂತದ್ದು, ಧೋತಿ ಬಟ್ಟೆಗಳನ್ನು ಸಪ್ಲೈ ಮಾಡುವಂತದ್ದು, ಇದರ ಬಗ್ಗೆ ಒಂದು ಸ್ಪಷ್ಟವಾದ ನೀತಿಯನ್ನು ಸರ್ಕಾರವು ಅನುಕರಣೆ ಮಾಡಬೇಕಾಗುತ್ತದೆ. ಇದನ್ನು ಹ್ಯಾಂಡ್‌ಲೂಮ್ ಕಾರ್ಪೊರೇಷನ್‌ನವರು ಸ್ವತಂತ್ರವಾಗಿ ಮೈನ್‌ಟೈನ್ ಮಾಡುತ್ತೇವೆ ಅಥವಾ ಬೇರೆ ಯೋಜನೆಗಳ ಮುಖಾಂತರವಾಗಿ ಇದನ್ನು ನಡೆಸಿಕೊಂಡು ಹೋಗುತ್ತೇವೆ ಎಂದರೆ ಅದು ಬೇರೆಯಾಗುತ್ತದೆ. ಆದರೆ ಇದಕ್ಕೊಂದು ಕಾಲಮಿತಿಯನ್ನು ಹಾಕಬೇಕಾಗುತ್ತದೆ. ನಾವು ಇಲ್ಲಿಂದ ಸಪ್ಲೈನ್ನು ತೆಗೆದುಕೊಳ್ಳುವುದಿಲ್ಲವೆಂದು ಮೊನ್ನೆ ಶಿಕ್ಷಣ ಸಚಿವರು ಹೇಳಿಬಿಟ್ಟರು. ಇದರ ಬಗ್ಗೆ ಹಲವಾರು ಪತ್ರಿಕೆಗಳಲ್ಲಿ ವಿಷಯಗಳು ಬಂದವು, ಶಿಕ್ಷಣ ಮಂತ್ರಿಗಳು ಮತ್ತು ಸರ್ಕಾರದವರು ಬೇರೆಯವರ ಮುಖಾಂತರವಾಗಿ ಕೆಲವೊಂದು ಖಾಸಗಿ ಕೈಗಾರಿಕೆಗಳ ಮುಖಾಂತರ ಈ ಬಟ್ಟೆಗಳನ್ನು ಖರೀದಿ ಮಾಡಬೇಕೆಂದು ಹೇಳಿದ್ದಾರೆ. ಇಲ್ಲಿರುವಂತಹ ಬಟ್ಟೆಗಳು ಹೆಚ್ಚಿನ ಬೆಲೆಗಳದ್ದಾಗಿರುತ್ತದೆ. ಕಡಿಮೆ ಬೆಲೆಯಿರುವ ಬಟ್ಟೆಗಳನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದಾರೆ. ಈ ತರಹ ಸುದ್ದಿಗಳು ಹಲವಾರು ಪತ್ರಿಕೆಗಳಲ್ಲಿ ಪ್ರಕಟವಾಯಿತು. ಈ ರೀತಿಯ ಒಂದು ಆದೇಶ ತಡೆಹಿಡಿದಾಗ ಹಲವಾರು ಸಮಸ್ಯೆಗಳಿಗೆ ಎಡೆಮಾಡಿಕೊಡುತ್ತದೆ. ಅದಕ್ಕಾಗಿ ಮಾನ್ಯ ಜವಳಿ ಸಚಿವರು ಇದರ ಬಗ್ಗೆ ಒಂದು ಸ್ಪಷ್ಟೀಕರಣವನ್ನು ಕೊಡಬೇಕು, ಇವತ್ತು ಹ್ಯಾಂಡ್‌ಲೂಮ್ ಕಾರ್ಪೊರೇಷನ್ ನೇಕಾರರು 15 ರಿಂದ 20 ಸಾವಿರ ಜನರು ಅದರ ಮೇಲೆ ಅವಲಂಬಿತರಾಗಿದ್ದಾರೆ. ಇದರಲ್ಲಿ ಹೆಚ್ಚು ಜನರು ಉತ್ತರಕರ್ನಾಟಕದವರು ಅವಲಂಬಿತರಾಗಿದ್ದಾರೆ, ಮೊನ್ನೆ ಒಂಡೆರಡು ತಿಂಗಳು ಶಿಕ್ಷಣ ಇಲಾಖೆಯಿಂದ ಈ ವಿದ್ಯಾ ವಿಕಾಸ ಯೋಜನೆಯೊಳಗಡೆ ಹಣವನ್ನು

ಕೊಡಬೇಕಾಗಿತ್ತು, ಅವರಿಗೆ ಅಡ್ವಾನ್ಸ್ ಹಣವನ್ನು ಕೊಡುವುದು ಲೇಟಾಗಿದ್ದರಿಂದ ಎಷ್ಟೋ ಜನ ನೇಕಾರರಿಗೆ ಮಜೂರಿ ಸಿಗಲಿಲ್ಲ, ಮತ್ತು ಎಷ್ಟೋ ಜನರಿಗೆ ನೂಲನ್ನು ತುರ್ತಾಗಿ ಖರೀದಿ ಮಾಡುವುದಕ್ಕೆ ಆಗಲಿಲ್ಲ, ಅವರುಗಳೆಲ್ಲರೂ ಬೀದಿಗೆ ಬೀಳಬೆಕಾದಂತಹ ಪ್ರಸಂಗ ಬಂತು. ಅವರೆಲ್ಲರೂ ಹೋರಾಟವನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದರು. ಅದಕ್ಕಾಗಿ ಈ ವಿಷಯದ ಬಗ್ಗೆ ಇವತ್ತು ಸಮವಸ್ತ್ರ ಖರೀದಿ ಆಗಬೇಕು ಮತ್ತು ಪಾಲಿಸಿ ಮ್ಯಾಟರನ್ನು ನೀವು ಮಾಡಿಕೊಳ್ಳಬೇಕು. ಈ ಹ್ಯಾಂಡ್‌ಲೂಮ್ ಕಾರ್ಪೊರೇಷನ್‌ಗೆ ಶಿಕ್ಷಣ ಇಲಾಖೆಯಿಂದ ಆರ್ಡರನ್ನು ತೆಗೆದುಕೊಳ್ಳಬೇಕೇ, ಬೇಡವೇ ಎಂಬ ಬಗ್ಗೆ ಇದೇ ಸಮಸ್ಯೆ ಬರಬಾರದು, ನಾವು ಖಾಸಗಿಯವರಿಗೆ ಕೊಡುವುದರಿಂದ ಕಡಿಮೆ ಬೆಲೆಗೆ ಅದು ಸಿಗುತ್ತದೆಂದು ಎನ್ನುವುದು ಬರಬಾರದು. ಏಕೆಂದರೆ ಇಲ್ಲಿ ನಾವುಗಳು ನೇಕಾರರ ಜೀವನವನ್ನು ಉಳಿಸಬೇಕಾಗುತ್ತದೆ. ಅದಕ್ಕಾಗಿ ಮಾನ್ಯ ಜವಳಿ ಸಚಿವರು ಇವರ ಬಗ್ಗೆ ಒಂದು ದೃಢವಾದ ನಿರ್ಧಾರವನ್ನು ತೆಗೆದುಕೊಂಡಿದ್ದಾರೆ. ನಾನು ಅವರ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತ ಪಡಿಸುತ್ತೇನೆ. ಆದರೆ ಪ್ರತಿ ವರ್ಷ ಇದೇ ರೀತಿ ಮುಂದುವರಿದುಕೊಂಡು ಹೋಗಬಾರದು, ಮತ್ತೆ ನಾವು ವಿಧಾನಸಭೆ ಅಧಿವೇಶನದಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡುವಂತಾಗಬಾರದು; ಪ್ರತಿ ವರ್ಷವು ನೇಕಾರರು ಹೋರಾಟವನ್ನು ಮಾಡುವಂತದ್ದು ಆಗಬಾರದು. ಅದಕ್ಕಾಗಿ ಮಾನ್ಯ ಸಚಿವರು ಇವರ ಬಗ್ಗೆ ದೃಢವಾದ ನಿಲುವನ್ನು ತೆಗೆದುಕೊಳ್ಳಬೇಕು, ಮತ್ತೆ ಮಂತ್ರಿಗಳಲ್ಲಿ ಒಂದು ಕಾಂಬಿನೇಷನ್ ಇರಬೇಕು, ಬೇರೆ ಬೇರೆ ಇಲಾಖೆಗಳ ಬಗ್ಗೆ ನಿಮ್ಮಲ್ಲಿ ಒಂದು ಡಿಫರೆನ್ಸ್ ಆಫ್ ಓಪಿನಿಯನ್ ಇರಬಾರದು. ನಿಮ್ಮೊಳಗೆ ಏನೇ ಡಿಫರೆನ್ಸ್ ಬಂದರೂ ಸಹ ಅದನ್ನು ಸರಿಪಡಿಸಿ ನೇಕಾರರಿಗೆ ಅನುಕೂಲವಾಗುವಂತಹ ಕೆಲಸವನ್ನು ತಾವು ಮಾಡಬೇಕು. ಇದರ ಬಗ್ಗೆ ಪಾಲಿಸಿ ಡಿಸಿಷನ್ಸ್ ಏನಿದೆ ಅದನ್ನು ತಾವು ದಯವಿಟ್ಟು ತಿಳಿಸಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರ ಮುಖಾಂತರ ತಮ್ಮಲ್ಲಿ ನಾನು ಕೇಳುತ್ತಿದ್ದೇನೆ.

+ಶ್ರೀ ಎಂ. ಮಹದೇವ (ರೇಷ್ಮೆ ಹಾಗೂ ಜವಳಿಸಚಿವರು): ಮಾನ್ಯ ಅಧ್ಯಕ್ಷರೆ, ಸರ್ಕಾರವು ನೇಕಾರರ ಸಮಸ್ಯೆಯನ್ನು ಅರ್ಥಮಾಡಿಕೊಂಡಿದೆ. ಸರ್ಕಾರವು ಯಾವುದೇ ಸಂದರ್ಭದಲ್ಲಿಯೂ ಕೂಡ ನೇಕಾರರನ್ನು ಕೈಬಿಡುವುದಿಲ್ಲ. ಸರ್ಕಾರವು "ವಿದ್ಯಾ ವಿಕಾಸ ಯೋಜನೆಯಲ್ಲಿ" ಸಮವಸ್ತ್ರವನ್ನು ಕೊಡುವುದಕ್ಕೆ ತಯಾರಾಗಿದೆ. ಮಾನ್ಯ ವಿರೋಧಪಕ್ಷದ ನಾಯಕರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಶಿಕ್ಷಣ ಸಚಿವರು ಮತ್ತು ರೇಷ್ಮೆ ಸಚಿವರಲ್ಲಿ "ವಿದ್ಯಾ ವಿಕಾಸ ಯೋಜನೆಯಲ್ಲಿ" ಆರ್ಡರನ್ನು ಕೊಡುವಾಗ ಭಿನ್ನಾಭಿಪ್ರಾಯ ಇರುವ ಬಗ್ಗೆ ಪತ್ರಿಕೆಗಳಲ್ಲಿ ವ್ಯಕ್ತವಾಗಿದೆ ಎಂದು ಹೇಳಿದರು. ನಮ್ಮಗಳಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿರುವುದಿಲ್ಲ, ಆದರೆ ವಿಚಾರವನ್ನು ವಿನಿಮಯ ಮಾಡಿಕೊಡುವಂತಹ ಸಂದರ್ಭದಲ್ಲಿ ಪತ್ರಿಕೆಗಳಲ್ಲಿ ಈ ಬಗ್ಗೆ ಬಂದಿದೆ. ಇದರ ಬಗ್ಗೆ ಭಿನ್ನಾಭಿಪ್ರಾಯಗಳೇನು ಇಲ್ಲ, ಆದರೆ ವಿಚಾರವನ್ನು ವಿನಿಮಯ ಮಾಡಿಕೊಂಡಿದ್ದೇವೆ. ನಮಗೆ ಸಕಾಲದಲ್ಲಿ ಸಮವಸ್ತ್ರವನ್ನು ಒದಗಿಸಿಕೊಡಬೇಕು ಮತ್ತು ಗುಣಮಟ್ಟದ ಸಮವಸ್ತ್ರ ಇರಬೇಕೆನ್ನುವುದು ಶಿಕ್ಷಣ ಸಚಿವರ ಅಭಿಪ್ರಾಯ. ನಾವು ಅದಕ್ಕೆ ಒಪ್ಪಿದ್ದೇವೆ. ಸಕಾಲದಲ್ಲಿ ಸಮವಸ್ತ್ರವನ್ನು ಒದಗಿಸಿಕೊಡುತ್ತೇವೆ, ಗುಣಮಟ್ಟವನ್ನು ನಾವು ಕಾಪಾಡುತ್ತೇವೆ. ಇಷ್ಟಕ್ಕೆ ವಿಷಯ ಸೀಮಿತವಾಗಿದೆಯೇ ಹೊರತು ಇದರಲ್ಲಿ ಭಿನ್ನಾಭಿಪ್ರಾಯವಾಗಲೀ ಇನ್ನೊಂದಾಗಲೀ, ಕೊಡುವ ವಿಚಾರದಲ್ಲಿ ಯಾವುದೂ ಏನೂ ಆಗಿಲ್ಲ. ವಿದ್ಯಾ ವಿಕಾಸ ಯೋಜನೆಯಲ್ಲಿ ಸುಮಾರು 38 ಕೋಟಿ ರೂಪಾಯಿಗಳ ಆರ್ಡರ್ಸ್ ಇದೆ.

ಈಗಾಗಲೇ ಅವರು 10 ಕೋಟಿ ರೂಪಾಯಿಗಳನ್ನು ಆಡ್ವಾನ್ಸ್ ಆಗಿ ಕೊಟ್ಟಿದ್ದಾರೆ. ಪವರ್‌ಲೂಮ್ ಮತ್ತು ಹ್ಯಾಂಡ್‌ಲೂಮ್‌ಗೆ ಎರಡಕ್ಕೂ ನಾವು ಹಣವನ್ನು ಕೊಟ್ಟಿದ್ದೇವೆ. ಈಗ ಅವರು ಕಳವಳವನ್ನು ವ್ಯಕ್ತಪಡಿಸಿದ್ದಾರೆ. ವರ್ಷೇ ವರ್ಷೇ ಇದೇ ಪರಿಸ್ಥಿತಿ ಮುಂದುವರಿಯಬಾರದು, ಒಂದು ಸಾರಿ ಕೊಡಬೇಕೆನ್ನುವುದು, ಒಂದು ಸಾರಿ ತಪ್ಪಿಸಬೇಕೆನ್ನುವುದು ಈ ರೀತಿಯಾದರೆ ಬಡ ನೇಕಾರರಿಗೆ ತೊಂದರೆಯಾಗುತ್ತದೆ ಇದರ ಬಗ್ಗೆ ಸರ್ಕಾರ ಒಂದು ದೃಢ ನಿಲುವನ್ನು ತೆಗೆದುಕೊಳ್ಳಬೇಕೆಂಬ ಒಳ್ಳೆಯ ಅಭಿಪ್ರಾಯವನ್ನು ವಿರೋಧ ಪಕ್ಷದ ನಾಯಕರು ವ್ಯಕ್ತಪಡಿಸಿದ್ದಾರೆ. ಅವರು ವ್ಯಕ್ತಪಡಿಸಿರತಕ್ಕ ಅಭಿಪ್ರಾಯ ಸಾಧುವಾಗಿರತಕ್ಕದ್ದು. ನೇಕಾರರ ಬಗ್ಗೆ ಸಾಕಷ್ಟು ಕಾಳಜಿಯನ್ನು ಸದನದ ಮೂಲಕ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಸರ್ಕಾರ ಇನ್ನುಮುಂದೆ ಈ ರೀತಿ ನೇಕಾರರ ಹಿತದೃಷ್ಟಿಯಿಂದ ಆರ್ಡರ್‌ಗಳನ್ನು ನಾವು ಬದಲಾಯಿಸತಕ್ಕ ಒಂದು ವ್ಯವಸ್ಥೆಗೆ ಹೋಗಲಿಕ್ಕೆ ಇಷ್ಟಪಡುವುದಿಲ್ಲ. ಸರ್ಕಾರ ಈಗಾಗಲೇ ಒಂದು ನಿಲುವು ತೆಗೆದುಕೊಂಡಿದೆ. ಇದರ ಜೊತೆಯಲ್ಲಿ ವಿದ್ಯಾ ಇಲಾಖೆಯ ವಿದ್ಯಾ ವಿಕಾಸ ಯೋಜನೆಯ ಆರ್ಡರ್ ಜೊತೆಯಲ್ಲಿ ಬೇರೆ ಇಲಾಖೆಗಳ ಆರ್ಡರ್‌ಗಳನ್ನು ಸಹ ತೆಗೆದುಕೊಳ್ಳಲಿಕ್ಕೆ ನಮ್ಮ ಇಲಾಖೆ ಪ್ರಯತ್ನ ಮಾಡುತ್ತಿದೆ. ಅದರ ಬಗ್ಗೆ ಮುಖ್ಯಮಂತ್ರಿಗಳ ಹತ್ತಿರ ಚರ್ಚೆ ಮಾಡುತ್ತಿದ್ದೇವೆ. ನೇಕಾರರ ಹಿತದೃಷ್ಟಿಯಿಂದ ಮಾಡುತ್ತಿದ್ದೇವೆ. ಈ ಆರ್ಡರ್‌ಗಳು ಇಲ್ಲದಿದ್ದರೆ ನೇಕಾರರು ಜೀವನ ಮಾಡುವುದಕ್ಕೆ ಕಷ್ಟವಾಗುತ್ತದೆ. ಪವರ್‌ಲೂಮ್ ಅಥವಾ ಹ್ಯಾಂಡ್‌ಲೂಮ್ ವೀವರ್ಸ್ ಈ ಆರ್ಡರ್‌ಗಳು ಇಲ್ಲದಿದ್ದರೆ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಹಾಗೆ ಅವರು ಬೀದಿ ಪಾಲಾಗುತ್ತಾರೆ. ಸರ್ಕಾರಕ್ಕೆ ನೇಕಾರರ ಬಗ್ಗೆ ಸಾಕಷ್ಟು ಕಾಳಜಿ ಇರುವುದರಿಂದ ನಾವು ಯಾವುದೇ ರೀತಿಯ ತೊಂದರೆಯಾಗದ ಹಾಗೆ ಮುಂದಿನ ವರ್ಷಗಳಲ್ಲಿ ಹೆಚ್ಚಿಗೆ ಆರ್ಡರ್‌ಗಳನ್ನು ತೆಗೆದುಕೊಂಡು ಅವರ ಜೀವನ ಮಾಡುವುದಕ್ಕೆ ಅನುಕೂಲ ಮಾಡಿಕೊಡಲಿಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ. ಈ ರೀತಿ ವಿವಾದಗಳು ಮುಂದೆ ಆಗದಹಾಗೆ ಸರ್ಕಾರ ಎಚ್ಚರಿಕೆಯನ್ನು ವಹಿಸುತ್ತದೆಂದು ತಮ್ಮ ಮೂಲಕ ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಆ) ಕೋಲಾರ ಜಿಲ್ಲೆಯ ಕುಡಿಯುವ ನೀರಿನ ಸಮಸ್ಯೆ

ಅಧ್ಯಕ್ಷರು: ಮಾನ್ಯ ಭೈರೇಗೌಡರೇ ತಮ್ಮದು ಮತ್ತು ಶ್ರೀನಿವಾಸಗೌಡ ಪ್ರಸ್ತಾವನೆ ಇಲ್ಲಿದೆ. ಶ್ರೀನಿವಾಸಗೌಡರು ಜಿಲ್ಲಾಮಂತ್ರಿಗಳ ಹತ್ತಿರ ಏನೋ ಮಾತನಾಡುತ್ತಾ ಮಗ್ನರಾಗಿದ್ದಾರೆ. ನೀತಿಯ ಬಗ್ಗೆ ಆಲೋಚನೆ ಮಾಡುತ್ತಿರಬಹುದೆಂದು ಕಾಣುತ್ತಿದೆ.

ಶ್ರೀ ಸಿ. ಬೈರೇಗೌಡ: ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಇಲ್ಲ.

ಅಧ್ಯಕ್ಷರು: ನಾಳೆ ತೆಗೆದುಕೊಳ್ಳೋಣ. ಮೊದಲೇ ನಾನು ಹೇಳಿದ್ದೇನೆ. ಗ್ರಾಮೀಣಾಭಿವೃದ್ಧಿ ಮಸೂದೆ ವಿಧಾನ ಪರಿಷತ್‌ನಲ್ಲಿದೆ ಅದು 21ನೇ ತಾರೀಖು ಲ್ಯಾಪ್ಸ್ ಆಗುತ್ತದೆ ಇವತ್ತು ಅವರು ಅದನ್ನು ಪಾಸ್ ಮಾಡಿಸಿಕೊಳ್ಳಬೇಕಾಗಿದೆ. ಅದಕ್ಕೋಸ್ಕರ ಅವರು ಪರಿಷತ್‌ನಲ್ಲಿದ್ದಾರೆ.

ಶ್ರೀ ಸಿ. ಬೈರೇಗೌಡ: ನನ್ನ ಪ್ರಶ್ನೆ ಬಹಳ ಸಿಂಪಲ್ ಆಗಿ ಇದೆ. ಯಾರಾದರೂ ಹೌದು ಅಥವಾ ಇಲ್ಲ, ಕೊಡುತ್ತೇವೆ ಅಥವಾ ಬಿಡುತ್ತೇವೆಂದು ಹೇಳಿಬಿಟ್ಟರೆ ಸಾಕು. ತಡ ಏಕೆ